**PW-1:** ಪಿ.ಡಿ. ಲಕ್ಷ್ಮೀ

ದಿನಾಂಕಃ **05.08.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರವಾಗಿ ಶ್ರೀ ವೈ.ಹೆಚ್.ಎಸ್. ವಕೀಲರಿಂದಃ**

1. ನನ್ನ ಮತ್ತು ಎದುರುದಾರರ ವಿವಾಹ ದಿನಾಂಕಃ 21.02.2013 ರಂದು ನೇರವೇರಿರುತ್ತದೆ. ನಮ್ಮದು ಕುಟುಂಬಸ್ಥರು ಒಪ್ಪಿತ ವಿವಾಹ. ಮದುವೆ ಮಾತುಕತೆಗೆ ಪ್ರತಿವಾದಿಯ ದೊಡ್ಡಮ್ಮ ಗೌರಮ್ಮ, ಗಿರಿಜಮ್ಮ ಮತ್ತು ನಾಗಮ್ಮ ರವರು ಬಂದಿದ್ದರು. ವೈ.ಎನ್. ಹೊಸಕೋಟೆಯಲ್ಲಿ ವಿವಾಹದ ಮಾತುಕತೆಯಾಗಿರುತ್ತದೆ. ವಿವಾಹವಾದ ನಂತರ 6 ವರ್ಷಗಳ ಕಾಲ ನಾವು ದಾಂಪತ್ಯ ಜೀವನವನ್ನು ನಡೆಸಿರುತ್ತೇವೆ. ವಿವಾಹವಾದ ನಂತರ ಪ್ರತಿವಾದಿ ನಿಮ್ಮನ್ನು ಚೆನ್ನಾಗಿ ನೋಡಿಕೊಳ್ಳುತಿದ್ದರು ಎಂದರೆ ಸಾಕ್ಷಿಯು 6 ವರ್ಷಗಳ ಕಾಲ ಚೆನ್ನಾಗಿ ನೋಡಿಕೊಂಡಿದ್ದರು ಎಂದು ಉತ್ತರಿಸುತ್ತಾರೆ. ನಮಗೆ ಇಬ್ಬರೂ ಮಕ್ಕಳಿರುತ್ತಾರೆ. ವಿವಾಹ ಸಂದರ್ಭದಲ್ಲಿ ಚಿನ್ನಾಭರಣಗಳನ್ನು ನೀಡಿದ ಬಗ್ಗೆ ಯಾವುದೇ ರಶೀದಿ ಹಾಜರುಪಡಿಸಿಲ್ಲ.

2. ವಿವಾಹ ಸಂದರ್ಭದಲ್ಲಿ 40 ಗ್ರಾಂ ಸರ, 20 ಗ್ರಾಂ ಬಳೆ, 15 ಗ್ರಾಂ ಓಲೆ ಮತ್ತು 10 ಗ್ರಾಂ ಉಂಗುರ ಮತ್ತು 20 ಗ್ರಾಂ ಬ್ರೆಸ್ ಲೇಟ್ ನೀಡಿದ ಬಗ್ಗೆ ನನ್ನಲ್ಲಿ ದಾಖಲೆಗಳು ಇಲ್ಲ. ಪ್ರತಿವಾದಿ ಹಲ್ಲೆ ಮಾಡಿದ ಬಗ್ಗೆ ನಾನು ಒಂದು ಬಾರಿ ಚಿಕಿತ್ಸೆ ಪಡೆದಿದ್ದು ಬೇರೆ ಸಂದರ್ಭದಲ್ಲಿ ಔಷಧಿ ಪಡೆದಿರುತ್ತೇನೆ. ಗಲಾಟೆ ಸಂದರ್ಭ ನನ್ನನ್ನು ರಕ್ಷಣೆ ಮಾಡಿದವರ ಹೆಸರನ್ನು ನಾನು ಬರೆಸಿಲ್ಲ. ಸ್ವಾಮಿ ಎಂಬುವವರು ಜಗಳ ಬಿಡಿಸಿರುತ್ತಾರೆ. ಪ್ರತಿವಾದಿ ನನಗೆ ನಿರಂತರವಾಗಿ ಹಲ್ಲೆ ಮಾಡಿದ್ದೇ ಆದಲ್ಲಿ 10 ವರ್ಷಗಳ ಕಾಲ ನಾನು ಅವರ ಜೊತೆ ಜೀವನ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಗೀತಾ ಎಂಬ ಪರಸ್ತ್ರಿ ಜೊತೆ ಸಂಬಂಧ ಇದೆ. ಗುಬ್ಬಿಯಲ್ಲಿ ಇರುವ ಮಿಲ್ ನ 3 ಮನೆಯ ಪಕ್ಕದ ನಂತರ ಅವರ ಮನೆ ಇದೆ. ನಾನು ಪ್ರತಿವಾದಿ ಆಕೆಯೊಂದಿಗೆ ಸಂಬಂಧ ಹೊಂದಿದ್ದಾರೆ ಎಂದು ಸಾಬೀತುಪಡಿಸಲು ಪೋಟೋಗಳು ಮತ್ತು

ವಿಡಿಯೋ ಚಿತ್ರೀಕರಣ ಹಾಜರುಪಡಿಸಿಲ್ಲ. ದಿನಾಂಕಃ 03.09.2025 ರಂದು ನನ್ನ ಮೇಲೆ ಹಲ್ಲೆ ಮಾಡಿದ ಬಗ್ಗೆ ಪೊಲೀಸರಿಗೆ ದೂರು ನೀಡಲು ಹೋಗಿದ್ದು ಸ್ವಾಮಿ ಎಂಬುವವರು ಪೊಲೀಸ್ ಠಾಣೆಗೆ ಬಂದು ಮಾತುಕತೆ ಮಾಡಿ ನನ್ನ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ನಾನು ಕ್ರಿಮಿನಲ್ ಪ್ರಕರಣ ದಾಖಲಿಸಿರುವುದಿಲ್ಲ. ನಾನು ಸ್ವ ಇಚ್ಛೆಯಿಂದ ನನ್ನ ತವರು ಮನೆಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ.

3. ನನ್ನ ಮತ್ತು ಪ್ರತಿವಾದಿಯ ಕೌಟುಂಬಿಕ ವಿಚಾರಕ್ಕೆ ಸುಮಾರು ಬಾರಿ ಪಂಚಾಯಿತಿ ಆಗಿದೆ ಎಂದರೆ ಸರಿ. ಪಂಚಾಯಿತಿಯಲ್ಲಿ ಪ್ರತಿವಾದಿ ನಿನ್ನನ್ನು ಮನೆಗೆ ಕರೆದುಕೊಂಡು ಹೋಗಲು ಸದಾ ಸಿದ್ಧ ಎಂದು ಹೇಳಿದ್ದಾರೆ ಎಂದರೆ ಸರಿ. ಆ ಪಂಚಾಯಿತಿಯಲ್ಲಿ ನಾನು ಮನೆಗೆ ಹೋಗುವುದಿಲ್ಲ ಎಂದು ನಿರಾಕರಿಸಿರುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೊಲದ ಕೂಲಿ ಕೆಲಸಕ್ಕೆ ಹೋಗುತ್ತೇನೆ ಎಂದರೆ ಸರಿ. ನನಗೆ ಸ್ವಂತ ಆದಾಯವಿದೆ. ನಾನು ತಂದೆ ತಾಯಿಯ ಜೊತೆ ವಾಸವಿದ್ದೇನೆ ಎಂದರೆ ಸರಿ. ನನ್ನ ದಿನನಿತ್ಯದ ಖರ್ಚುಗಳನ್ನು ಪೋಷಕರೇ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. ನನ್ನ ಗಂಡನಿಗೆ ಅಂಗಡಿ ಇದೆ ಮಿಲ್ ಇದ್ದು ಅದರಲ್ಲಿ ನಮ್ಮದು ಕೆಲವು ಮಿಷನ್ ಗಳು ಇವೆ. ಮಿಲ್ ಸ್ವಂತದ್ದಾಗಿರುತ್ತದೆ. ನನ್ನ ಗಂಡ ತಿಂಗಳಿಗೆ 1 ಲಕ್ಷ ಸಂಪಾದನೆ ಮಾಡುತ್ತಾರೆ. ಪ್ರತಿವಾದಿ 1 ಲಕ್ಷ ಸಂಪಾದನೆ ಮಾಡುತ್ತಾರೆ ಎಂಬ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ.

4. ಪ್ರತಿವಾದಿ ನನ್ನ ವಿರುದ್ಧ ಗುಬ್ಬಿ ನ್ಯಾಯಾಲಯದಲ್ಲಿ ದಾಂಪತ್ಯ ಪುನರ್ ಸ್ಥಾಪನೆಗಾಗಿ ಎಂ.ಸಿ. 107/2025 ರಂತೆ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ಅರ್ಜಿ ಚಾಲ್ತಿಯಲ್ಲಿದೆ ಎಂದರೆ ಸರಿ. ಪ್ರತಿವಾದಿ ನನ್ನೊಂದಿಗೆ ಜೀವನ ಮಾಡಲು ಸದಾ ಸಿದ್ಧರಿದ್ದಾರೆ ಎಂಬ ವಿಚಾರ ನನಗೆ ಗೊತ್ತು. ಪ್ರತಿವಾದಿ ನಿಮ್ಮೊಂದಿಗೆ ಜೀವನ ಮಾಡಲು ಸಿದ್ಧರಿದ್ದು ನೀವು ಸಿದ್ಧರಿಲ್ಲ ಎಂದರೆ ಸಾಕ್ಷಿಯು ಗೀತಾ ರವರನ್ನು ಬಿಟ್ಟು ಬಂದು 4 ವರ್ಷ ಜೀವನ ಮಾಡಿ ಎಂದು ಹೇಳಿದರೂ ಕೇಳುತ್ತಿಲ್ಲ ಎಂದು ಉತ್ತರಿಸುತ್ತಾರೆ. ನಾನು ಹೆಚ್ಚಿನ ಪರಿಹಾರ ಪಡೆಯುವ

ಸಲುವಾಗಿ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ವಿರುದ್ಧ ಅಕ್ರಮ ಸಂಬಂಧ, ಜೂಜಾಟ ಮತ್ತು ಮಧ್ಯಪಾನ ಆರೋಪಗಳು ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಯ ಆದಾಯವನ್ನು ಮೀರಿ ನಾನು ಹೆಚ್ಚಿನ ಪರಿಹಾರ ಕೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು)

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.